### ಪರಿಷತ್ತಿನಲ್ಲಿ ಹೆಚ್ಚಿದ ಪ್ರಬಲ ಆಕಾಂಕ್ಷಿಗಳು, ವಿಸ್ತರಣೆಗೆ ವಿಳಂಬಕ್ಕೆ ಕಾರಣರಾದರು

# ಮೇಲ್ಮನೆ ಸದಸ್ಯರ ಮೇಲಾಟ-ಪಕ್ಷದ ನಾಯಕರಿಗೆ ಪೀಕಲಾಟ!

**ಶಿವಕುಮಾರ್ ಬೆಳ್ಳಿತಟ್ಟೆ** ಬೆಂಗಳೂರು

ಮುಂದೂಡಿಕೆಯಿಂದ ಮರೀಚಿಕೆಯಂತಾಗಿರುವ ಸಚಿವ ಸಂಪುಟ ವಿಸ್ತರಣೆಗೆ ಈಗ ಶಾಸಕರಿಗಿಂತ ಪರಿಷತ್ ಸದಸ್ಯರೇ ದೊಡ್ಡ ತಲೆನೋವು.



ಸಂಪುಟ ವಿಸ್ತರಣೆಗೆ ಹೈಕಮಾಂಡ್ ಒಪ್ಪಿಗೆ ನೀಡುತ್ತಿದ್ದಂತೆ ಸಹಜವಾಗಿಯೇ ಆಕಾಂಕ್ಷಿ ಶಾಸಕರು ಹೆಚ್ಚಾಗಿ ಪಕ್ಷದ ನಾಯಕರ ಮೇಲೆ ಒತ್ತಡ ತರಲಾರಂಭಿಸಿದರು. ಇದರ ಮಧ್ಯೆ ಶಾಸಕರಿಗೆ ಪೈಪೋಟಿ ನೀಡುವಂತೆ ಸುಮಾರು 8ಕ್ಕೂ ಹೆಚ್ಚಿನ ಪರಿಷತ್ ಸದ್ಯರು ಕೂಡ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗಿದ್ದು, ಇದು ಬರಿ ಯಡಿಯೂರಪ್ಪ ಮಾತ್ರವಲ್ಲದೆ ಪಕ್ಷದ ಹೈಕಮಾಂಡ್‌ಗೆ ಕೂಡ ಸಮಸ್ಯೆ ತಂದಿಟ್ಟಿದೆ.

ಸಾಮಾನ್ಯ ಯಾವುದೇ ಸರಕಾರ ಅಧಿಕಾರಕ್ಕೆ ಬಂದರೂ ಪರಿಷತ್ ಪ್ರಾತಿನಿಧ್ಯವಾಗಿ ಗರಿಷ್ಠ ಇಬ್ಬರು ಸದಸ್ಯರಿಗೆ ಸಚಿವ ಸ್ಥಾನ ನೀಡಲಾಗುತ್ತದೆ. ಅದರಂತೆ ಈಗ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಹಾಗೂ ಕೋಟಾ ಶ್ರೀನಿವಾಸ ಪೂಜಾರಿ ಅವರಿಗೆ ಅವಕಾಶ ನೀಡಲಾಗಿದೆ. ಈ ಮೂಲಕ ಪರಿಷತ್ತಿಗೆ ನೀಡಬೇಕಿರುವ ಸಚಿವ ಸ್ಥಾನಗಳ ಕೋಟಾ ಮುಗಿಸಲಾಗಿದೆ. ಆದರೂ ಹೆಚ್ಚುವರಿ ಇಬ್ಬರು ಪರಿಷತ್ ಸದಸ್ಯರಿಗೆ ಸಚಿವ ಸ್ಥಾನ ನೀಡುವ ಅನಿವಾರ್ಯಕ್ಕೆ ಸರಕಾರ ಕಟ್ಟು ಬಿದ್ದಿದೆ. ಇನ್ನೂ ಅನೇಕ ಸದಸ್ಯರು ಸಚಿವಾ ಕಾಂಕ್ಷಿಗಳಾಗಿದ್ದು, ಇದು ಪಕ್ಷಕ್ಕೆ ಬಿಡಿಸಲಾಗದ ಕಗ್ಗಂಟಾಗಿದ್ದು, ಇದರಿಂದ ಸಂಪುಟ ವಿಸ್ತರಣೆ ಪ್ರಕ್ರಿಯೆ ಪದೇಪದೆ ಮುಂದೆ ಹೋಗುವಂತಾಗಿದೆ.

ಒಂದುವೇಳೆ ಪರಿಷತ್ತಿನಲ್ಲಿ ಹೆಚ್ಚಿನ ಸದಸ್ಯರಿಗೆ ಅವಕಾಶ ನೀಡ ಬೇಕಾದರೆ ಸಚಿವ ಸಂಪುಟ ವಿಸ್ತರಣೆ ಬದಲು ಪುನಾರಚನೆ ಮಾಡು ವ ಅನಿವಾರ್ಯ ಎದುರಾಗಲಿದ್ದು, ಇದರಿಂದ ಪಕ್ಷ ಹಾಗೂ ಸರಕಾರ ಶಾಸಕರ ಅಸಮಾಧಾನ ಮತ್ತು ಬಂಡಾಯದ ಬಿಸಿಯನ್ನು ಎದುರಿಸಬೇಕಾಗುತ್ತದೆ ಎಂದು ಪಕ್ಷದ ಮೂಲಗಳು ಹೇಳಿವೆ.



## ಆಕಾಂಕ್ಷಿಗಳು ಯಾರು, ಏನಾಗುತ್ತೆ?

ಸರಕಾರ ರಚನೆಗೆ ಸಹಕರಿಸಿದವರ ಪಟ್ಟಿಯಲ್ಲಿರುವ ಸದಸ್ಯರಾದ ಆರ್. ಶಂಕರ್, ಎಂ.ಟಿ.ಬಿ.ನಾಗರಾಜ್, ಎಚ್. ವಿಶ್ವನಾಥ್, ಸಿ.ಪಿ. ಯೋಗೇಶ್ವರ್ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಗಳು. ಇದೇರೀತಿ ಪಕ್ಷಕ್ಕಾಗಿ ದುಡಿದಿರುವ ಆಯನೂರು ಮಂಜುನಾಥ್, ರವಿಕುಮಾರ್, ಪುಟ್ಟಣ್ಣ, ರಘುನಾಥ್ ಮಲ್ಕಾಪುರೇ ಹಾಗೂ ಸಂಕನೂರು ಸೇರಿ ಅನೇಕ ಮಂದಿ ಆಕಾಂಕ್ಷಿಗಳಾಗಿದ್ದಾರೆ. ಆದರೆ ಇವರಲ್ಲಿ ಎಂ.ಟಿ.ಬಿ.ನಾಗರಾಜ್ ಮತ್ತು ಶಂಕರ್ ಅವರಿಗೆ ಸಂಪುಟದಲ್ಲಿ ಅವಕಾಶ ನೀಡಲೇಬೇಕಾದ ಅನಿವಾರ್ಯವಿದೆ. ಇದು ನಡೆದಿದ್ದೇ ಆದರೆ ಉಳಿದ ಆಕಾಂಕ್ಷಿಗಳನ್ನು ನಿಭಾಯಿಸುವುದು ಪಕ್ಷಕ್ಕೆ ದೊಡ್ಡ ಸವಾಲಾಗಲಿದೆ. ಆಗ ಪಕ್ಷದ ನಾಯಕರು ಸಂಪುಟ ವಿಸ್ತರಣೆ ಬದಲು ಪುನಾರಚನೆಗೆ ಕೈ ಹಾಕಬೇಕಾಗುತ್ತದೆ. ಪರಿಷತ್ತಿನಲ್ಲೇ ಸಚಿವರಾಗಿರುವ ಲಕ್ಷ್ಮಣ ಸವದಿ, ಕೋಟಾ ಶ್ರೀನಿವಾಸ ಪೂಜಾರಿ ಸೇರಿ ಸಂಪುಟದಲ್ಲಿ ಅನೇಕ ಸಚಿವರನ್ನು ಕೈ ಬಿಡುವ ಆಪರೇಷನ್ ಆರಂಭಿಸಬೇಕಾಗುತ್ತದೆ. ಹೀಗಾಗಿ ಸಂಪುಟ ವಿಸ್ತರಣೆಯೋ ಅಥವಾ ಪುನಾರಚನೆಯೋ ಎನ್ನುವ ಗೊಂದಲ ಇನ್ನೂ ಮನೆ ಮಾಡಿದ್ದು, ಡಿಸೆಂಬರ್ ಆರಂಭಕ್ಕೆ ಎಲ್ಲವೂ ಸ್ಪಷ್ಟವಾಗಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

## ಕುರುಬರ ಪ್ರಾತಿನಿಧ್ಯಕ್ಕೆ ಅಸಮಾಧಾನ!

ಸಂಪುಟದಲ್ಲಿ ಕುರುಬ ಸಮುದಾಯದ ಪ್ರಾತಿನಿಧ್ಯವಾಗಿ ಹಿರಿಯ ಸಚಿವ ಕೆ.ಎಸ್. ಈಶ್ವರಪ್ಪ ಹಾಗೂ ಭೈರತಿ ಬಸವರಾಜು ಅವರಿಗೆ ಅವಕಾಶ ನೀಡಲಾಗಿದೆ. ಈಗ ಸರಕಾರ ರಚನೆಗೆ ಸಹಕರಿಸಿದರು ಎನ್ನುವ ಕಾರಣಕ್ಕೆ ಎಂ.ಟಿ.ಬಿ.ನಾಗರಾಜ್ ಹಾಗೂ ಶಂಕರ್, ವಿಶ್ವನಾಥ್ ಅವರಿಗೆ ಸಚಿವ ಸ್ಥಾನ ನೀಡಿದರೆ ಸಂಪುಟದಲ್ಲಿ ಕುರುಬ ಸಮುದಾಯದ ಪ್ರಾತಿನಿಧ್ಯ ಐದಕ್ಕೆ ಏರುಲಿದ್ದು, ಇದು ಹೊಸ ದಾಖಲೆ ಸ್ಥಾಪಿಸಿದಂತಾಗುತ್ತದೆ. ಜತೆಗೆ ಇತರ ಸಮುದಾಯಗಳ ನಾಯಕರ ವಿರೋಧಕ್ಕೂ ಗುರಿಯಾಗಬೇಕಾಗುತ್ತದೆ. ಒಂದು ವೇಳೆ ರವಿಕುಮಾರ್ ಮತ್ತು ರಘುನಾಥ್ ಮಲ್ಕಾಪುರೇಗೆ ಅವಕಾಶ ನೀಡಿದರೆ ಪರಿಷತ್ತಿನ ಇತಿಹಾಸದಲ್ಲೇ ಹಿಂದುಳಿದ ವರ್ಗಕ್ಕೆ ಹೆಚ್ಚು ಪ್ರಾತಿನಿಧ್ಯ ನೀಡಿದ ದಾಖಲೆ ಬರೆದಂತಾಗುತ್ತದೆ. ಆದರೆ ಇದು ಕೂಡ ಇತರ ಸಮುದಾಯಗಳ ಅಸಮಾಧಾನಕ್ಕೆ ಎಡೆ ಮಾಡಿಕೊಡುವ ಸಾಧ್ಯತೆ ಇದೆ.



ಕೇಂದ್ರ ಸರಕಾರ ಹೆಚ್ಚಿನ ಸಚಿವ ಸ್ಥಾನವನ್ನು ರಾಜ್ಯಸಭೆಗೆ ನೀಡಲಾಗುತ್ತದೆ. ಹಾಗೆಯೇ ಪ್ರಮುಖ ಖಾತೆಗಳನ್ನೂ ರಾಜ್ಯ ಸಭೆ ಪ್ರತಿನಿಧಿಸುವವರಿಗೆ ನೀಡಲಾಗುತ್ತದೆ. ಆದ್ದರಿಂದ ರಾಜ್ಯ ವಿಧಾನ ಪರಿಷತ್ ಸದಸ್ಯರಿಗೆ ಹೆಚ್ಚಿನ ಅವಕಾಶ ನೀಡಬೇಕಿದೆ.

- **ಆಯನೂರು ಮಂಜುನಾಥ್**, ವಿಧಾನಪರಿಷತ್ತಿನ ಹಿರಿಯ ಸದಸ್ಯರು